



ಡಾ. ಎಸ್. ರಾಮಮೂರ್ತಿ

# 11-1-2018ರಿಂದ 17-1-2018ರ ವರೆಗೆ



**ಮೇಷ**

ವಾರದ ಆರಂಭದಲ್ಲಿ ಬೇಸರ, ವೃತ್ತಿ– ವ್ಯವಹಾರಗಳಲ್ಲಿ ಹಿನ್ನಡೆ. ಹಿರಿಯರ ಮೇಲೆ ಕೋಪ. ಅಹಿತ ಭೋಜನ, ಆರೋಗ್ಯ ವ್ಯತ್ಯಯ. ವಾರದ ಮಧ್ಯಭಾಗದಿಂದ ಅನುಕೂಲ, ಧೈರ್ಯ. ಹಿತೈಷಿಗಳ ಆಗಮನ, ಕೆಲಸ ಕಾರ್ಯಗಳಲ್ಲಿ ಯಶಸ್ಸು. ಪ್ರಯಾಣದಲ್ಲಿ ನಿರಾತಂಕ. ವ್ಯಾಪಾರದಲ್ಲಿ ಲಾಭ. ಪತ್ರಾಗಮನ, ಶುಭ ಸುದ್ದಿ. ಶುಭ ದಿನ: 15; ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ



**ವೃಷಭ**

ವಾರದ ಆರಂಭದಲ್ಲಿ ಅನುಕೂಲ. ಏಕಾಗ್ರತೆ, ಕಾರ್ಯಕಲಾಪಗಳಲ್ಲಿ ಸಫಲತೆ. ಲೇವಾದೇವಿಗಳಲ್ಲಿ ಸೂಕ್ತ ಲಾಭ. ಆರೋಗ್ಯ ವೃದ್ಧಿ. ವಾರದ ಮಧ್ಯಭಾಗದಲ್ಲಿ ಬೇಸರ. ಉದ್ಯೋಗದಲ್ಲಿ ತಪ್ಪುಗಳಾಗುವಿಕೆ. ವ್ಯಾಪಾರದಲ್ಲಿ ಹಿನ್ನಡೆ. ವಿರೋಧಿಗಳಿಂದ ತೊಂದರೆ. ಹಿಂದಿನ ತಕರಾರುಗಳ ಚಿಂತನೆ. ವಾರದ ಕೊನೆಯಲ್ಲಿ ಪ್ರಗತಿ. ಮನಃ ಶಾಂತಿ. ಶುಭ ದಿನ: 12; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ



**ಮಿಥುನ**

ಕೆಲಸ ಕಾರ್ಯಗಳು ಅಡೆತಡೆಯಿಲ್ಲದೆ ನಡೆಯುವುದು. ಹಿರಿಯರೊಂದಿಗಿನ ಸಮಾಲೋಚನೆಯಿಂದ ಧೈರ್ಯ ಪ್ರಾಪ್ತಿಯಾಗುವುದು. ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭ ದೊರಕುವುದು. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ಕುಟುಂಬ ಸದಸ್ಯರಲ್ಲಿ ಒಮ್ಮತ ಉಂಟಾಗಿ ಸಂತಸವಾಗುವುದು. ಶುಭ ದಿನ: 14; ಗಣಪತಿ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಕಟಕ**

ವಾರದ ಆರಂಭದಲ್ಲಿ ಅಧಿಕ ಒತ್ತಡ. ಹಣದ ಸಮಸ್ಯೆ. ಅಕಾಲ ಭೋಜನ. ವಿರೋಧಿಗಳಿಂದ ತೊಂದರೆ. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ವಾರದ ಮಧ್ಯಭಾಗದಿಂದ ಚೇತರಿಕೆ. ಉದ್ಯೋಗದಲ್ಲಿ ಸಮಸ್ಯೆ ನಿವಾರಣೆ. ಆತ್ಮಬಲ ಹೆಚ್ಚುವುದು. ಅಧ್ಯಯನದಲ್ಲಿ ಮುನ್ನಡೆ. ಕುಟುಂಬ ಸದಸ್ಯರಲ್ಲಿ ಹೊಂದಾಣಿಕೆ. ಶುಭ ದಿನ: 15; ಗುರು ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಸಿಂಹ**

ವಾರದ ಆರಂಭದಲ್ಲಿ ಸಂತಸ. ಲೇವಾದೇವಿಗಳಲ್ಲಿ ಲಾಭ. ನಿರೀಕ್ಷೆಯಂತೆ ಕಾರ್ಯಸಾಧನೆ. ಹಿತಕರ ಸುದ್ದಿ. ಆಪ್ತರ ಭೇಟಿ. ವಾರದ ಮಧ್ಯಭಾಗದಲ್ಲಿ ಚಂಚಲ ಮನಸ್ಸು, ಭಯ. ವಾಹನಗಳಿಂದ ತೊಂದರೆ. ವೃತ್ತಿ–ವ್ಯವಹಾರಗಳಲ್ಲಿ ಅಶಾಂತಿ. ಸೋದರ ವರ್ಗದವರ ಮೇಲೆ ಕೋಪ. ವಾರದ ಕೊನೆಯಲ್ಲಿ ಸಮಾಧಾನ. ಶುಭ ದಿನ: 12; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಕನ್ಯಾ**

ವಾರದ ಮಧ್ಯಭಾಗದವರೆಗೂ ಅನುಕೂಲ. ಅಭಿವೃದ್ಧಿ ಬರಬೇಕಾದ ಹಣ ಬರುವುದು. ಉದ್ಯೋಗದಲ್ಲಿ ಪ್ರಗತಿ. ಸಮಯೋಚಿತ ಮಾತುಗಳಿಗೆ ಪ್ರಶಂಸೆ. ಕ್ರಯ ವಿಕ್ರಯಗಳಲ್ಲಿ ನಿರೀಕ್ಷೆಯಂತೆ ಲಾಭ. ಕುಟುಂಬದಲ್ಲಿ ಒಮ್ಮತ. ವಾರದ ಕೊನೆಯಲ್ಲಿ ಪ್ರಯಾಣದಲ್ಲಿ ಒತ್ತಡ. ಸೋಮಾರಿತನ ಕಾರ್ಯ ಕಲಾಪಗಳಲ್ಲಿ ಅಡಚಣೆ. ಶುಭ ದಿನ: 14; ಗಣಪತಿ ಮತ್ತು ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ



**ತುಲಾ**

ಉದ್ಯೋಗ ವೃತ್ತಿ ವ್ಯವಹಾರಗಳಲ್ಲಿ ಪ್ರಗತಿ, ಕುಟುಂಬ ಸದಸ್ಯರಿಂದ ಸಹಕಾರ. ವ್ಯಾಪಾರದಲ್ಲಿ ಲಾಭವೃದ್ಧಿ. ಆತ್ಮೀಯರ ಭೇಟಿ. ಶುಭ ಕಾರ್ಯಗಳಲ್ಲಿ ಆಸಕ್ತಿ. ಆಟ–ಪಾಠಗಳಲ್ಲಿ ಮುನ್ನಡೆ. ದೀರ್ಘಕಾಲದ ಸಮಸ್ಯೆ ಬಗೆಹರಿಯುವುದು. ಹಿತ ಸುದ್ದಿ. ವಿರೋಧಿಗಳು ತಟಸ್ಥರಾಗುವರು. ಗಣ್ಯರ ಭೇಟಿ. ಶುಭ ದಿನ: 15; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ



**ವೃಶ್ಚಿಕ**

ವಾರದ ಆರಂಭದಲ್ಲಿ ಭಯದ ವಾತಾವರಣ. ಪೆಟ್ಟಾಗುವ ಸಾಧ್ಯತೆ. ವೃತ್ತಿ– ಪ್ರವೃತ್ತಿಗಳಲ್ಲಿ ಏನಾದರೊಂದು ಅಡಚಣೆ. ಲೆಕ್ಕ ಪತ್ರಗಳಲ್ಲಿ ತಪ್ಪಾಗುವ ಸಂಭವ. ವಾರದ ಮಧ್ಯಭಾಗದಿಂದ ಒತ್ತಡ ನಿವಾರಣೆ. ಕೆಲಸ ಕಾರ್ಯಗಳಲ್ಲಿ ಯಶಸ್ಸು. ಲೇವಾ–ದೇವಿಗಳಲ್ಲಿ ಲಾಭ. ಆತ್ಮೀಯರೊಂದಿಗೆ ಸಮಾಲೋಚನೆ. ಶುಭ ದಿನ: 15; ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ



**ಧನಸ್ಸು**

ವಾರದ ಆರಂಭದಲ್ಲಿ ಅನುಕೂಲ. ಅಧ್ಯಯನದಲ್ಲಿ ಪ್ರಗತಿ. ಕಾರ್ಯ ಕಲಾಪಗಳಲ್ಲಿ ಸಫಲತೆ. ವ್ಯಾಪಾರದಲ್ಲಿ ನಿರೀಕ್ಷೆಯಂತೆ ಲಾಭ. ವಾರದ ಮಧ್ಯ ಭಾಗದಲ್ಲಿ ಆತಂಕ. ವೃತ್ತಿ–ವ್ಯವಹಾರಗಳಲ್ಲಿ ಒತ್ತಡ. ಗುರು–ಹಿರಿಯರ ಭೇಟಿಗೆ ಅಡಚಣೆ, ವಾರಾಂತ್ಯ ಪರಿಸ್ಥಿತಿ ಉತ್ತಮವಾಗುವುದು. ಶುಭ–ಸಂದೇಶ. ಶುಭ ದಿನ: 12; ಗಣಪತಿ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ



**ಮಕರ**

ವಾರದ ಮಧ್ಯಭಾಗದವರೆವಿಗೂ ಅನುಕೂಲ. ಶ್ರಮವಿಲ್ಲದೆ ಕಾರ್ಯ ಸಿದ್ಧಿ. ಕ್ರಯ–ವಿಕ್ರಯ ಒಪ್ಪಂದ ವ್ಯವಹಾರಗಳಲ್ಲಿ ಲಾಭ. ಆಪ್ತರಿಂದ ಸಹಾಯ. ಲೆಕ್ಕಪತ್ರ ವ್ಯವಹಾರಗಳಲ್ಲಿ ಸಫಲತೆ. ವಾಹನ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ. ವಾರದ ಕೊನೆಯಲ್ಲಿ ಆಲಸ್ಯ. ಮುಖ್ಯ ಸಂದೇಶ ವಿಳಂಬವಾಗುವ ಸಾಧ್ಯತೆ. ಶುಭ ದಿನ: 14; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ



**ಕುಂಭ**

ಕೆಲಸ ಕಾರ್ಯಗಳು ಸಕಾಲಕ್ಕೆ ಮುಗಿದು ಮನಃಶಾಂತಿ ಹಾಗೂ ಧೈರ್ಯ ಪ್ರಾಪ್ತಿಯಾಗುವುದು. ಕೊಳ್ಳುವ ಹಾಗೂ ಮಾರುವ ಒಪ್ಪಂದ ವ್ಯವಹಾರಗಳಲ್ಲಿ ಸೂಕ್ತ ಲಾಭ ದೊರೆಯುವುದು. ಪ್ರಯಾಣಗಳಲ್ಲಿ ಆತಂಕವಿಲ್ಲ. ದೇವತಾ ಕ್ಷೇತ್ರದರ್ಶನ. ಯೋಜನೆಗಳು ಸಫಲವಾಗುವುದು. ಪತ್ರಾಗಮನದಿಂದ ಸಂತಸ. ಶುಭ ದಿನ: 15; ಗಣಪತಿ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ



**ಮೀನ**

ವಾರದ ಆರಂಭದಲ್ಲಿ ಒತ್ತಡ. ಆರೋಗ್ಯದಲ್ಲಿ ವ್ಯತ್ಯಾಸ. ಅಕಾಲ ಭೋಜನ. ಲೇವಾದೇವಿಗಳಲ್ಲಿ ಹಾನಿ ಸಂಭವ. ವಾರದ ಮಧ್ಯಭಾಗದಿಂದ ಅನುಕೂಲ. ಅಧ್ಯಯನದಲ್ಲಿ ಪ್ರಗತಿ. ಸ್ಥಿರ ಮನಸ್ಸು ಉದ್ಯೋಗದಲ್ಲಿ ಮುನ್ನಡೆ. ಅಧಿಕಾರಿ ವರ್ಗದವರಿಂದ ಸಹಕಾರ. ವ್ಯಾಪಾರದಲ್ಲಿ ಶ್ರಮಕ್ಕೆ ನಿರೀಕ್ಷಿತ ಲಾಭ. ಆಪ್ತರ ಭೇಟಿ. ಶುಭ ದಿನ: 15; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ